# ಕಣವಿ ನಿಧನಕ್ಕೆ ಮುರುಘಾ ಶರಣರ ಸಂತಾಪ

ಚೆನ್ನವೀರ ಕಣವಿ ನಿಧನಕ್ಕೆ

ಮುರುಘಾ ಶರಣರ ಸಂತಾಪ

ಚಿತ್ರದುರ್ಗ ಫೆ. 16 : ಕನ್ನಡ ಸಾರಸ್ವತ ಲೋಕದ ಹಿರಿಯ ಸಾಹಿತಿ, ಮಾರ್ಗದರ್ಶಕ ಡಾ. ಚೆನ್ನವೀರ ಕಣವಿ ನಿಧನಕ್ಕೆ ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡದ ಸಮನ್ವಯದ ಕವಿ ಎಂದೇ ಪ್ರಸಿದ್ಧರಾಗಿದ್ದ ಕಣವಿಯವರು ಏಳು ದಶಕಗಳಿಂದ ಸಾಹಿತ್ಯ ಲೋಕದಲ್ಲಿ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಹೃದಯವೈಶಾಲ್ಯತೆ ಮತ್ತು ಅನನ್ಯವಾದ ಪ್ರತಿಭೆ ಎಂಥವರನ್ನು ಆಕರ್ಷಿಸುತ್ತಿತ್ತು. ಸ್ನೇಹಜೀವಿಯಾಗಿದ್ದರು. ಸಾಹಿತ್ಯ ಕೃಷಿಯನ್ನು ನಿರಂತರವಾಗಿಸಿಕೊಂಡು ಕೊನೆಯವರೆಗು ಬರವಣಿಗೆ ನಿಲ್ಲಿಸಿದವರಲ್ಲ. ದಾವಣಗೆರೆಯ ವಿರಕ್ತಮಠದಲ್ಲಿ 2016ರಲ್ಲಿ ನಡೆದ ಪೀಠಾರೋಹಣ ಬೆಳ್ಳಿಹಬ್ಬ ಮತ್ತು ಶರಣಸಂಸ್ಕೃತಿ ಉತ್ಸವ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಿದ್ದನ್ನು ಸ್ಮರಿಸಿರುವ ಶ್ರೀಗಳು, ಇತ್ತೀಚೆಗೆ ಧಾರವಾಡದ ಎಸ್.ಡಿ.ಎಂ. ಆಸ್ಪತ್ರೆಗೆ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸಲಾಗಿತ್ತು. ಅವರ ನಿಧನದಿಂದ ಕುಟುಂಬಕ್ಕೆ ಉಂಟಾಗಿರುವ ನೋವನ್ನು ಭರಿಸುವ ಶಕ್ತಿಯನ್ನು ಬಸವಾದಿ ಪ್ರಮಥರು ಕರುಣಿಸಲಿ ಎಂದಿದ್ದಾರೆ.

